ರಾಜ್ಯಕ್ಕೆ ಬಂದ ಮಕ್ಕಳ ಪೋಷಕರನ್ನು ಪತ್ತೆ ಮಾಡಿ ಅವರವರ ವಶಕ್ಕೆ ಬಿಡಲಾಗಿದೆ. ಪೋಷಕರು ಪತ್ತೆ ಆಗದಿರುವ ಸಂದರ್ಭಗಳಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ದಾಖಲಿಸಲಾಗಿದೆ.

ಉ) ಬಾಲ ಕಾರ್ಮಿಕರು 90 ಹಾಗೂ ಲೈಂಗಿಕ ಕಿರುಕುಳಕ್ಕೊಳಗಾಗಿರುವ 32 ಮಕ್ಕಳನ್ನು ರಕ್ಷಿಸಲಾಗಿದೆ.

137 ಶ್ರೀ ಸುರೇಶಗೌಡ, : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನ ಸಣ್ಣ ಹಿಡುವಳಿ ರೈತ ಕುಟುಂಬದವರಿಗೆ ಪ್ರಸಕ್ತ ಸಾಲಿನಲ್ಲಿ ನೀಡಲಾಗುತ್ತಿರುವ ಸಾವಿರ ರೂಪಾಯಿಗಳ ಸಹಾಯ ಧನಕ್ಕೆ ಗುರುತಿಸಲಾಗಿರುವ ರೈತರೆಷ್ಟು;

ಆ) ಈವರೆವಿಗೂ ಎಷ್ಟು ರೈತರಿಗೆ ಸಹಾಯ ಧನ ನೀಡಲಾಗಿದೆ;

ಇ) ಹಾಗಿದ್ದಲ್ಲಿ, ಎಲ್ಲಾ ಅರ್ಹ ರೈತರಿಗೆ ಎಷ್ಟು ದಿವಸದೊಳಗೆ ಸಹಾಯ ಧನ ಒದಗಿಸಲಾಗುವುದು?

ಶ್ರೀ ಎಸ್. ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) 21030 ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳನ್ನು ಗುರುತಿಸಲಾಗಿದೆ.

ಆ) ಇದುವರೆಗೆ 15,276 ರೈತರಿಗೆ ಸಹಾಯಧನ ನೀಡಲಾಗಿದೆ.

ಇ) 2009ರ ಮಾರ್ಚ್ ಅಂತ್ಯದೊಳಗೆ ಎಲ್ಲಾ ಅರ್ಹ ರೈತರಿಗೆ ಸಹಾಯಧನ ಒದಗಿಸಲಾಗುವುದು.

112 ಶ್ರೀ ಸಂಗಪ್ಪಂಗಿ ಎಸ್ : ಮಾನ್ಯ ಜವಳಿ, ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಕ್ರೀಡೆಗಳ ಅಂಗವಾಗಿ ನಿರ್ಮಾಣವಾದ ಒಳಾಂಗಣ ಕ್ರೀಡಾಂಗಣವನ್ನು ಇದುವರೆಗೂ ಯಾವ ಯಾವ ಕ್ರೀಡಾ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ. (ವಿವರಣೆ ನೀಡುವುದು)

ಆ) ಈ ಕ್ರೀಡಾಂಗಣಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಇದರಿಂದ ಕಳೆದ ಮೂರು ವರ್ಷಗಳಲ್ಲಿ ಬಂದ ಆದಾಯವೆಷ್ಟು? ಈ ಆದಾಯವನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ (ವಿವರ ನೀಡುವುದು);

ಈ) ರಾಜ್ಯದ ಕ್ರೀಡಾಪಟುಗಳಿಗೆ ಈವರೆವಿಗೂ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪದಕಗಳನ್ನು ಪಡೆದ ಕ್ರೀಡಾಪಟುಗಳಿಗೆ ಸರ್ಕಾರದಿಂದ ಯಾವ ಸೌಲಭ್ಯವನ್ನು ನೀಡಲಾಗಿದೆ (ವಿವರ ನೀಡುವುದು);

ಉ) ರಾಜ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗಣಗಳನ್ನು ಯಾವ ಯಾವ ಭಾಗದಲ್ಲಿ ಸ್ಥಾಪಿಸಲಾಗಿದೆ; ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು);

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ರಾಷ್ಟ್ರೀಯ ಕ್ರೀಡೆಗಳ ಅಂಗವಾಗಿ ನಿರ್ಮಾಣವಾದ ಒಳಾಂಗಣ ಕ್ರೀಡಾಂಗಣವನ್ನು ಇದುವರೆಗೂ ರಾಜ್ಯಮಟ್ಟದ, ರಾಷ್ಟ್ರ ಮಟ್ಟದ ಮತ್ತು ಅಂತರರಾಷ್ಟ್ರೀಯ ಮಟ್ಟದ ಒಳಾಂಗಣ ಕ್ರೀಡೆಗಳನ್ನು/ಸ್ಪರ್ಧೆಗಳನ್ನು ನಡೆಸಲು ಬಳಸಿಕೊಳ್ಳಲಾಗಿದೆ.

ಅಂತರ್‌ರಾಷ್ಟ್ರೀಯ ಮಟ್ಟದ 18ನೇ ಏಶ್ಯನ್ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿ, ವಿಶ್ವ ದೇಹದಾರ್ಢ್ಯ ಸ್ಪರ್ಧೆ, ಏಷ್ಯನ್ ನೆಟ್‌ಬಾಲ್ ಪಂಧ್ಯಾವಳಿ, ಏಷ್ಯನ್ ಕಿಕ್ ಬಾಕ್ಸಿಂಗ್ ಸ್ಪರ್ಧೆ, ರಾಷ್ಟ್ರೀಯ ವಾಲಿಬಾಲ್ ಪಂದ್ಯಾವಳಿ, ರಾಷ್ಟ್ರೀಯ ಟೇಬಲ್ ಟನ್ನಿಸ್ ರ್‍ಯಾಂಕಿಂಗ್ ಸ್ಪರ್ಧೆ, ರಾಷ್ಟ್ರೀಯ ಟೆಕ್ವೋಂಡ್ ಪಂದ್ಯಾವಳಿ, ರಾಷ್ಟ್ರೀಯ ಬಾಕ್ಸಿಂಗ್ ಸ್ಪರ್ಧೆ, ರಾಷ್ಟ್ರೀಯ ಮಟ್ಟದ ಮೊಯ್‌ಥಾಯ್, ರಾಷ್ಟ್ರೀಯ ಮಟ್ಟದ ಭಾರ ಎತ್ತುವ ಸ್ಪರ್ಧೆ, ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿ ಮತ್ತು ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗಳನ್ನು ನಡೆಸಲು ಬಳಸಲಾಗಿದೆ.

ಆ) ಈ ಕ್ರೀಡಾಂಗಣಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಕಳೆದ ಮೂರು ವರ್ಷಗಳಲ್ಲಿ ಬಂದ ಆದಾಯ ವಿವರ ಈ ಕೆಳಕಂಡಂತಿವೆ.

1. 2005–06–ರೂ.2,90,25,861–00
2. 2006–07–ರೂ.3,39,32,041–00
3. 2007–08–ರೂ.4,29,26,109–00

ಈ ಆದಾಯವನ್ನು ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದ ಸಂದರ್ಭದಲ್ಲಿ ನಿರ್ಮಿಸಲಾಗಿರುವ ಈ ಕೆಳಕಂಡ ಕ್ರೀಡಾಂಗಣಗಳ ನಿರ್ವಹಣೆಗೆ, ದುರಸ್ತಿ ಕಾರ್ಯಗಳಿಗೆ, ಕ್ರೀಡಾಂಗಣಗಳಲ್ಲಿ ಅಗತ್ಯವಿರುವ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಕ್ರೀಡಾ ಸಲಕರಣೆಗಳನ್ನು ಒದಗಿಸಲು ಉಪಯೋಗಿಸಲಾಗುತ್ತಿದೆ.

1. ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣ
2. ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣ
3. ಕೋರಮಂಗಲ ಒಳಾಂಗಣ ಕ್ರೀಡಾಂಗಣ
4. ಹಾಕಿ ಕ್ರೀಡಾಂಗಣ
5. ಮೈಸೂರು ಒಳಾಂಗಣ ಕ್ರೀಡಾಂಗಣ
6. ಹೊಂಬೇಗೌಡ ನಗರ ಖೋ ಖೋ ಕ್ರೀಡಾಂಗಣ
7. ವಿದ್ಯಾಪೀಠ ಕಬ್ಬಡ್ಡಿ ಕ್ರೀಡಾಂಗಣ ಮತ್ತು
8. ಜೆ. ಪಿ. ನಗರ ಆಟದ ಮೈದಾನ

ಅಲ್ಲದೆ, ರಾಜ್ಯದ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಮತ್ತು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಉತ್ತೇಜಿಸುವ ಸಲುವಾಗಿ 2007–08ನೇ ಸಾಲಿನಲ್ಲಿ ಮೈಸೂರಿನಲ್ಲಿ ನಡೆದ ದಸರಾ ಕ್ರೀಡಾ ಕೂಟದಲ್ಲಿ ಭಾಗವಹಿಸಿ, ಪದಕ ಪಡೆದ ಕ್ರೀಡಾ ಪಟುಗಳಿಗೆ ನಗದು ಪುರಸ್ಕಾರವನ್ನು ನೀಡಲಾಗಿದೆ.(ಮೊದಲ ಬಹುಮಾನ ರೂ. 5000.00 ಎರಡನೆ ಬಹುಮಾನ ರೂ.3000.00 ಮತ್ತು ಮೂರನೆಯ ಬಹುಮಾನ ರೂ. 1500–00)

ಹಾಗೆಯೇ ಬೀಜಿಂಗ್‌ನಲ್ಲಿ ನಡೆಯುತ್ತಿರುವ ಒಲಂಪಿಕ್ಸ್‌ನ ಕ್ರೀಡೆಯಲ್ಲಿ ರಾಜ್ಯದಿಂದ ರಾಷ್ಟ್ರವನ್ನು ಪ್ರತಿನಿಧಿಸುತ್ತಿರುವ ಕ್ರೀಡಾಪಟುಗಳಿಗೆ ಮತ್ತು ಕ್ರೀಡಾ ಪಟುಗಳ ತರಬೇತುದಾರರಿಗೂ ಸಹಾ ನಗದು ಪುರಸ್ಕಾರವನ್ನು ನೀಡಲಾಗಿದೆ. (ಕ್ರೀಡಾಪಟುಗಳಿಗೆ ತಲಾ ರೂ.5.00 ಲಕ್ಷಗಳು ಮತ್ತು ಕ್ರೀಡಾಪಟುಗಳ ತರಬೇತಿದಾರರಿಗೆ ರೂ.1.00 ಲಕ್ಷಗಳು)

ಈ) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡೆ/ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪದಕಗಳನ್ನು ಪಡೆದ ಕ್ರೀಡಾಪಟುಗಳಿಗೆ ಸರ್ಕಾರದಿಂದ ಇಲ್ಲಿಯವರೆಗೆ 288 ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ನೀಡಿ ರೂ.50,000/ಗಳಂತೆ ನಗದ ಮತ್ತು ಸಮವಸ್ತ್ರಗಳನ್ನು ಪ್ರತಿಯೊಬ್ಬ ಕ್ರೀಡಾಪಟುವಿಗೆ ನೀಡಲಾಗಿದೆ. 2002–03ನೇ ಸಾಲಿನಲ್ಲಿ ಆಂಧ್ರಪ್ರದೇಶದ ಹೈದರಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಗಳಲ್ಲಿ ಪದಕ ಪಡೆದ 67 ಕ್ರೀಡಾಪಟುಗಳಿಗೆ ಹಾಗೂ 2006–07ನೇ ಸಾಲಿನಲ್ಲಿ ಅಸ್ಸಾಂ ರಾಜ್ಯದ ಗುವಾಹಟಿಯಲ್ಲಿ ನಡೆದ 33ನೇ ರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ಪದಕ ಪಡೆದ 120 ಕ್ರೀಡಾಪಟುಗಳಿಗೆ ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಪದಕ ಪಡೆದ 33 ಕ್ರೀಡಾಪಟುಗಳಿಗೆ ನಗದು ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಈ ಉದ್ದೇಶಕ್ಕಾಗಿ ಒಟ್ಟು ರೂ.58,28,150/–ಗಳ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗಿದೆ. 2003ನೇ ಸಾಲಿನಲ್ಲಿ ನಡೆದ ಫೆಸಿಫಿಕ್ ಯೂತ್ ಗೇಮ್ಸ್‌ನಲ್ಲಿ ಭಾಗವಿಹಿಸಿ ಬೆಳ್ಳಿಪದಕ ಪಡೆದ ಒಬ್ಬ ಅಂಗವಿಕಲ ಕ್ರೀಡಾಪಟುವಿಗೆ ರೂ. 75,000/–ಗಳ ನಗದು ಪ್ರಶಸ್ತಿ ನೀಡಲಾಗಿದೆ ಹಾಗೂ 2004ನೇ ಸಾಲಿನಲ್ಲಿ ಗ್ರೀಸ್‌ನ ಅಥೆನ್ಸ್‌ನಲ್ಲಿ ನಡೆದ ಪ್ಯಾರಾ ಒಲಿಂಪಿಕ್ ಅಥ್ಲೆಟಿಕ್ಸ್ ಗೇಮ್ಸ್‌ನಲ್ಲಿ ಭಾಗವಹಿಸಿದ್ದಕ್ಕಾಗಿ ಒಬ್ಬ ಕ್ರೀಡಾಪಟುವಿಗೆ ಸರ್ಕಾರದಿಂದ ರೂ. 1.50 ಲಕ್ಷಗಳ ಧನ ಸಹಾಯ ನೀಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರೀಡಾ ಮೀಸಲಾತಿ ಅಡಿಯಲ್ಲಿ ಈವರೆಗೆ ಒಟ್ಟು 124 ಕ್ರೀಡಾಪಟುಗಳಿಗೆ ನಿವೇಶನ ಹಂಚಿಕೆ ಮಾಡಿರುತ್ತದೆ.

ಉ) ರಾಜ್ಯದ ವಿವಿಧ ಭಾಗಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ಸ್ಥಾಪಿಸಲಾಗಿದ್ದು, ಇದಕ್ಕಾಗಿ ಭರಿಸಲಾದ ವೆಚ್ಚದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಸಂಪಂಗಿ.ಎನ್.ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 112 ಕ್ಕೆ ಅನುಬಂಧ

ಪೂರ್ಣಗೊಂಡ ತಾಲ್ಲೂಕು ಕ್ರೀಡಾಂಗಣದ ವಿವರ

ಕ್ರಮ ಸಂಖ್ಯೆ	ತಾಲ್ಲೂಕು ಕ್ರೀಡಾಂಗಣ	ಜಿಲ್ಲೆ	ಒಟ್ಟು ವೆಚ್ಚ (ರೂ.ಲಕ್ಷಗಳಲ್ಲಿ)
01	ಸಾಗರ	ಶಿವಮೊಗ್ಗ	17.767
02	ಪೊನ್ನಂಪೇಟೆ (ವಿರಾಜಪೇಟೆ ತಾ)	ಕೊಡಗು	10.77
03	ಸೋಮವಾರಪೇಟೆ	ಕೊಡಗು	14.20
04	ಕಾರ್ಕಳ	ಉಡುಪಿ	35.93
05	ಹರಪನಹಳ್ಳಿ	ದಾವಣಗೆರೆ	27.00
06	ಚಿಂತಾಮಣಿ	ಕೋಲಾರ	17.767
07	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	15.00
08	ತಿಪಟೂರು	ತುಮಕೂರು	18.223
09	ಮಧುಗಿರಿ	ತುಮಕೂರು	24.492
10	ಶಿರಾ	ತುಮಕೂರು	26.08
11	ಪಾವಗಡ	ತುಮಕೂರು	26.11
12	ಅರಸೀಕೆರೆ	ಹಾಸನ	29.45
13	ಚನ್ನರಾಯಪಟ್ಟಣ	ಹಾಸನ	36.75
14	ಕೆ.ಆರ್.ನಗರ	ಮೈಸೂರು	38.35
15	ಗೋಕಾಕ್	ಬೆಳಗಾಂ	15.50
16	ಜಮಖಂಡಿ	ಬಾಗಲಕೋಟೆ	13.50
17	ಮುದೋಳ್	ಬಾಗಲಕೋಟೆ	21.15
18	ಲಿಂಗಸುಗೂರು	ರಾಯಚೂರು	9,947
19	ಮದ್ದೂರು	ಮಂಡ್ಯ	52.35
20	ನರಸಿಂಹರಾಜಪುರ	ಚಿಕ್ಕಮಗಳೂರು	13.44
21	ಮೂಡಿಗೆರೆ	ಚಿಕ್ಕಮಗಳೂರು	29.40
22	ಕಡೂರು	ಚಿಕ್ಕಮಗಳೂರು	14.55
23	ಜೇವರ್ಗಿ	ಗುಲ್ಬರ್ಗಾ	12.00

24	ಹೊಸನಗರ	ಶಿವಮೊಗ್ಗ	12.00
25	ಯಲ್ಲಾಪುರ	ಉತ್ತರಕನ್ನಡ	23.750
26	ಮುಂಡಗೋಡ್	ಉತ್ತರಕನ್ನಡ	16.200
27	ಕನಕಪುರ	ಬೆಂಗಳೂರು	21.50
28	ಶಿರಗೊಪ್ಪ	ಬಳ್ಳಾರಿ	30.00
29	ಗುಂಡ್ಲುಪೇಟೆ	ಚಾಮರಾಜನಗರ	30.26
30	ಔರಾದ್	ಬೀದರ್	26.83
31	ರೋಣ	ಗದಗ್	51.00
32	ರಾಣಿಬೆನ್ನೂರ್	ಹಾವೇರಿ	91.81
33	ಹೆಗ್ಗಡದೇವನಕೋಟೆ	ಮೈಸೂರು	27.50
34	ಹುಣಸೂರು	ಮೈಸೂರು	58.00
35	ತುರುವೇಕೆರೆ	ತುಮಕೂರು	45.00

* * *